## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| **S.C.No** : | 268/2021 |
|---|---|

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀ ಮಾದಯ್ಯಾ | |
| ತಂದೆ ಹೆಸರು | ಶ್ರೀ ಚಿಕ್ಕನಂಜಯ್ಯ @ ಸಿದ್ದನಂಜಯ್ಯ | ಸಾಕ್ಷಿಗೆ **ದಿಃ 29.04.2025** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 73 ವರ್ಷ | |
| ಉದ್ಯೋಗ | ಏನು ಇಲ್ಲ. | ಪಿ.ಡಬ್ಲ್ಯೂ-05 |
| ವಾಸ ಸ್ಥಳ | ಮೂಗೂರು ಟಿ.ನರಸೀಪುರ. | ಸಿ.ಡಬ್ಲ್ಯೂ-08 |

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ಮೃತ ಭಾಗ್ಯಲಕ್ಷ್ಮೀ ನನ್ನ ಮಗಳು. ನನ್ನ ಮಗಳಿಗೆ ಒಂದು ಗಂಡ ಮತ್ತು ಒಂದು ಹೆಣ್ಣು ಇಬ್ಬರು ಮಕ್ಕಳು. ಫ್ರಾಸಾ-1 ನನ್ನ ಮೊಮ್ಮಗಳು. ಚಾಸಾ-14 ನನ್ನ ಮೊಮ್ಮಗ. ಫ್ರಾಸಾ-4 ನನ್ನ ಊರಿನವರು. ಮೃತ ನನ್ನ ಮಗಳು ಭಾಗ್ಯಲಕ್ಷ್ಮೀ ಯನ್ನು 20 ವರ್ಷದ ಹಿಂದೆ ಊಟಿ ಬಳಿ ಇರುವ ಬರೋಡಾ ಎಂಬ ಹಳ್ಳಿಗೆ ಕೊಟ್ಟು ವಿವಾಹ ಮಾಡಿದ್ದೆ. ನನ್ನ ಮಗಳಿಗೆ ಇಬ್ಬರು ಮಕ್ಕಳು ಆಗುವವರೆಗೂ ಗಂಡ-ಹೆಂಡತಿ ಜೊತೆಯಲ್ಲಿ ಇದ್ದರು. ನನ್ನ ಮಗಳು ಸಾಯುವುದ್ದಕ್ಕೆ 5 ವರ್ಷಗಳ ಮುಂಚೆ ಮಕ್ಕಳನ್ನು ಕರೆದುಕೊಂಡು ತವರು ಮನೆಗೆ ಬಂದರು. ನನ್ನ ಅಳಿಯ ತಮಿಳುನಾಡು ಹಾಗೂ ಊಟಿ ಕಡೆಗೆ ಲಾರಿ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದರು. ನನ್ನ ಅಳಿಯ ಕಿರುಕುಳ ನೀಡುತ್ತಿದ್ದ ಕಾರಣ ಮಕ್ಕಳನ್ನು ಕರೆದುಕೊಂಡು ನನ್ನ ಮಗಳು ತವರು ಮನೆಗೆ ಬಂದಿದ್ದಳು. ನನ್ನ ಮಗಳು ತವರು ಮನೆಗೆ ಬಂದ ಮೇಲೆ

ಮೈಸೂರಿನ ಗಾರ್ಮೆಂಟ್ಸ್ ಒಂದರಲ್ಲಿ ಮೂಗೂರಿನಿಂದ ಬಂದು ಕೆಲಸ ಮಾಡುತ್ತಿದ್ದರು. ನನ್ನ ಮಗಳು ತೀರಿಕೊಂಡಾಗ ಪ್ರಾಸಾ-4 ನರ್ಸಿಂಗ್ ಕೋರ್ಸ್ ಮಾಡುತ್ತಿದ್ದಳು.

ನನ್ನ ಮಗಳು ಭಾಗ್ಯಲಕ್ಷ್ಮೀ ದಿಃ25.08.2021 ರಲ್ಲಿ ತೀರಿಕೊಂಡರು. ನನ್ನ ಮಗಳು ದಿನವು ಬೆಳಿಗ್ಗೆ ಮತ್ತು ಸಂಜೆ ಮನೆಯಿಂದ ಅರ್ಧ ಕಿ.ಮೀ ದೂರ ಇರುವ ಕಾಲುವೆ ಬಳಿ ವಾಕಿಂಗ್ ಹೋಗುತ್ತಿದ್ದಳು. ದಿಃ 25.08.2021 ರಂದು ನನ್ನ ಮಗಳು ಮೃತ ಭಾಗ್ಯಲಕ್ಷ್ಮೀ ಸಂಜೆ 5.45 ಗಂಟೆ ಸಮಯಕ್ಕೆ ಮನೆ ಬಿಟ್ಟಿದ್ದಳು. ಮನೆಯಲ್ಲಿ ನಾನು, ನನ್ನ ಮೊಮ್ಮಕಳು ಹಾಗೂ ಮೊಮ್ಮಗ ಇದ್ದೆವು. ದಿನಾ ವಾಕಿಂಗ್ ಹೋದಾಗ ನನ್ನ ಮಗಳು ಅರ್ಧ ಗಂಟೆಯಲ್ಲಿ ವಾಪಸ್ಸು ಬರುತ್ತಿದ್ದಳು ಆ ದಿನ ಅರ್ಧ ಗಂಟೆ ಆದರೂ ಮನಗೆ ಬರಲಿಲ್ಲ. ಆಗ ನಾವೆಲ್ಲರೂ 10-15 ಜನರು ನನ್ನ ಮಗಳನ್ನ ಹುಡುಕಾಡಿದ್ದೆವು ಆದರೂ ಸಿಗಲಿಲ್ಲ. ನಂತರ ಯಾರೋ ಊರಿನ ಜನ ನನ್ನ ಮಗಳ ಹೆಣವನ್ನು ಕಾಲುವೆಯಲ್ಲಿ ತುರಿಕಿರುತ್ತಾರೆ ಎಂದು ನನಗೆ ಹೇಳಿದರು. ಆಗ ನಾನು ಪ್ರಾಸಾ-4, ಚಾಸಾ-14, ನನ್ನ ತಮ್ಮನ ಹೆಂಡತಿ ಎಲ್ಲರೂ ಸೇರಿ ಕಾಲುವೆ ಬಳಿ ಹೋದೆವು. ನಾವು ಹೋಗಿದ್ದ ಸ್ಥಳ ಹೊಸಳ್ಳಿ ಮೊಳೆಗೆ ಹೋಗುವ ಕಾಲುವೆ ದಾರಿ ಆಗಿತ್ತು. ನಾವು ಹೋದಾಗ ಕಾಲುವೆಯಲ್ಲಿ ಹೆಣವನ್ನು ನೀರು ಬರುವ ಜಾಗದಲ್ಲಿ ತುರಿಕಿದ್ದರು. ಮಗಳ ಹೆಣವನ್ನು ನಾನು ನೋಡಿದಾಗ, ಕಾಲುವೆ ಏರಿಯ ಬಳಿ ನನ್ನ ಮಗಳ ಛತ್ರಿ, ಚಪ್ಪಲಿ, ಗಾಜಿನ ಬಳೆಗಳು ಬಿದ್ದಿದ್ದವು. ನನ್ನ ಮಗಳನ್ನ ನಾನು ನೋಡಿದಾಗ ತಲೆಯ ಹಿಂಭಾಗದಲ್ಲಿ ಏಟು ಬಿದ್ದಿತ್ತು, ಮಗಳ ಮೈ ಮೇಲೆ ಅರಿಶಿಣ ದಾರದಲ್ಲಿ ಪೋಣಿಸಿದ ಚಿನ್ನದ

ತಾಳಿ, ಪ್ಲಾಸ್ಟಿಕ್ ಓಲೆಗಳು, ಅವಳ ಮೈ ಮೇಲೆ ಹೂವಿನ ಚಿತ್ರ ಇರುವ ನೈಟಿ ಇತ್ತು. ನನ್ನ ಮಗಳ ಹೆಣವನ್ನು ಟಿ.ನರಸೀಪುರ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದೆವು. ಅಲ್ಲಿ ಹೆಣದ ಮಹಜರ ಮಾಡಿದರು, ಅಲ್ಲಿ ಹೇಳಿಕೆ ಪಡೆದಿರುತ್ತಾರೆ.

ನನ್ನ ಮಗಳ ಹೆಣ ಸಿಕ್ಕಿದ 2-3 ದಿನಗಳ ನಂತರ ಆರೋಪಿಯನ್ನು ಪೊಲೀಸರು ಠಾಣೆಗೆ ಕರೆದುಕೊಂಡು ಬಂದಿದ್ದರು. ಆರೋಪಿಯ ಹೆಸರು ಮಹೇಶ್, ತಂದೆ ಹೆಸರು ನಂಜುಂಡಯ್ಯ ಅವರು ನಮ್ಮ ಊರಿನವರು. ನನ್ನ ಮುಂದೆ ಆರೋಪಿಯ ಹೇಳಿಕೆಯನ್ನು ಪೊಲೀಸರು ಪಡೆದಿರುತ್ತಾರೆ. ಆ ದಿನ ಆರೋಪಿ ಸೈಕಲ್ ನಲ್ಲಿ ಎಲ್ ಕೋಟ್ (ಮಾವುಟಿ) ಇಟ್ಟುಕೊಂಡು ಸೈಕಲ್ ನಲ್ಲಿ ನೀರು ಕಟ್ಟಲು ಹೋಗಿದ್ದನು, ಆರೋಪಿ ನನ್ನ ಎದುರಿನಲ್ಲಿ ನಾನೇ ಭಾಗ್ಯಲಕ್ಷ್ಮೀಗೆ ಎಲ್ ಕೋಟ್ ನಿಂದ ತಲೆಯ ಹಿಂಭಾಗಕ್ಕೆ ಹೊಡೆದು ಕೊಲೆ ಮಾಡಿ, ಚೀಲಕ್ಕೆ ಹಾಕಿ, ನಾಲೆಯಲ್ಲಿ ನೀರು ಬರುವ ಜಾಗಕ್ಕೆ ತುರಿಕಿರುತ್ತೇವೆ ಎಂದು ಹೇಳುತ್ತಾನೆ. ಆರೋಪಿ ನನ್ನ ಮೊಮ್ಮಗಳು ಪೂಜಾಶ್ರೀ ಯನ್ನು ಕಾಲೇಜಿಗೆ ಹೋಗಿ ಬರುವಾಗ ಚುಡಾಯಿಸುತ್ತಿದ್ದ, ಆರೋಪಿ ನನ್ನ ಮೊಮ್ಮಗಳಿಗೆ ಫೋನ್ ಮಾಡಿ ಬೈಯುತ್ತಿದ್ದ ನನ್ನ ಮಗಳಿಗೂ ಫೋನ್ ಮಾಡಿ ಬೈಯುತ್ತಿದ್ದ. ನನ್ನ ಮಗಳಿಗೆ ಈ ವಿಷಯ ಗೊತ್ತಾಗಿ ಸಂಬಂಧಿಕರಿಗೆ ಹೇಳಿದ್ದರು, ನನ್ನ ತಮ್ಮನ ಮಕ್ಕಳು ಆರೋಪಿಗೆ ಹೊಡೆದಿದ್ದರು. ಆರೋಪಿಗೆ ನನ್ನ ಮೊಮ್ಮಗಳನ್ನು ಮದುವೆ ಮಾಡಿಕೊಡಲು ನನ್ನ ಮಗಳಿಗೆ ಇಷ್ಟ ಇರಲಿಲ್ಲ, ಕಾರಣ ಅವನು ಗಾರೆ ಕೆಲಸ ಮಾಡುತ್ತಿದ್ದ ನನ್ನ ಮಗಳು ನರ್ಸಿಂಗ್ ಓದುತ್ತಿದ್ದಳು. ನನ್ನ ಮಗಳು,

ಮೊಮ್ಮಗಳಿಗೆ ಅವನನ್ನು ನೀನು ಮಾತನಾಡಿದರೆ ಅವನಿಗೆ ಹೊಡಿ ಎಂದು ಹೇಳಿಕೊಟ್ಟಿದ್ದಳು. ಆರೋಪಿಗೆ ನಮ್ಮ ಮನೆಯವರನ್ನು ಕಂಡರೆ ಆಗುತ್ತಿರಲಿಲ್ಲ.

ಆರೋಪಿ ಪ್ರಾಸಾ–4 ರವರನ್ನ ಪ್ರೀತಿ ಮಾಡುತ್ತಿದ್ದು, ಆ ವಿಷಯ ನನ್ನ ಮಗಳಿಗೆ ಇಷ್ಟ ಇಲ್ಲದೇ ಇದ್ದ ಕಾರಣ ಹಾಗೂ ಆರೋಪಿಗೆ ಬೈಯುತ್ತಿದ್ದರಿಂದ ನನ್ನ ಮಗಳ ಮೇಲೆ ದ್ವೇಷ ಇಟ್ಟುಕೊಂಡು ಆರೋಪಿ ಕೊಲೆ ಮಾಡಿರುತ್ತಾನೆ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನಾನು ಮೇಲೆ ತಿಳಿಸಿದ ಎಲ್ಲಾ ವಿಚಾರಗಳನ್ನು ಪೊಲೀಸರಿಗೆ ಹೇಳಿರುತ್ತೇನೆ. ಸಾಕ್ಷಿಯು ಮುದ್ದೆಮಾಲು 4 ಛತ್ರಿ, 7 ಗೋಣಿ ಚೀಲ್, 8 ಮೃತಳ ಮೈ ಮೇಲೆ ಇದ್ದ ನೈಟಿ, 2 (10)ಬಳೆ ಚೂರುಗಳು, 3 ನನ್ನ ಮಗಳ ಒಂದು ಜೊತೆ ಚಪ್ಪಲಿ ಇವುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀಸವಾಲು :– ಆರೋಪಿ ಪರ ಶ್ರೀ ಆರ್.ಇ ವಕೀಲರಿಂದ(Though DLSA)–**

ಆರೋಪಿ ಹುಟ್ಟಿದಾಗಿನಿಂದಲೂ ನಮ್ಮ ಊರಿನಲ್ಲಿ ವಾಸ ಇರುತ್ತಾನೆ. ನನ್ನ ಅಳಿಯ, ನನ್ನ ಮಗಳ ವಿರುದ್ಧ ಕೌಟುಂಬಿಕ ನ್ಯಾಯಾಲಯದಲ್ಲಿ ಒಂದು ಕೇಸು ದಾಖಲು ಮಾಡಿರುತ್ತಾನೆ ಎಂದರೆ ಹೌದು, ಸದರಿ ಪ್ರಕರಣ ಪ್ರಸ್ತುತ ನಡೆಯುತ್ತಿರುತ್ತದೆ ಎಂದರೆ ಹೌದು. ನನ್ನ ಅಳಿಯ ನನ್ನ ಮಗಳ ಮೇಲೆ ಟಿ.ನರಸೀಪುರ ನ್ಯಾಯಾಲಯದಲ್ಲಿ ಯಾವ ಕಾರಣಕ್ಕೆ ಕೇಸ್ ಮಾಡಿದ್ದರು ಎಂದರೆ ನನ್ನ ಅಳಿಯ ಸರಿ ಇರಲಿಲ್ಲ, ಕುಡಿಯುತ್ತಿದ್ದರು

ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ, ಈ ಕಾರಣಗಳಿಂದ ಕೇಸ್ ಮಾಡಿದ್ದರು. ಮಹದೇವಸ್ವಾಮಿಯವರು ಮೂಗೂರಿನ ಜಮೀನಿನಲ್ಲಿ ಮಧ್ಯೆ ಮಾರಾಟ ಮಾಡುತ್ತಿದ್ದರು ಎಂದರೆ ಹೌದು. ನನಗೆ ಕುಡಿಯುವ ಚಟ ಇರುತ್ತದೆ ಎಂದರೆ ಸರಿಯಲ್ಲ. ಮಹದೇವಸ್ವಾಮಿ ಯವರು ನನಗೆ ಮಧ್ಯೆವನ್ನು ಸರಬರಾಜು ಮಾಡುತ್ತಿದ್ದರು ಎಂದರೆ ಸರಿಯಲ್ಲ.

ದ್ವಾರಕಿ @ ಮಹದೇವಸ್ವಾಮಿ ಹಾಗೂ ಮೃತ ಭಾಗ್ಯಲಕ್ಷ್ಮೀ ನಡುವೆ ಅಕ್ರಮ ಸಂಬಂಧ ಇತ್ತು ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಮಹದೇವಸ್ವಾಮಿಗೆ ಮದುವೆ ಆಗಿದ್ದು, ಹೆಂಡತಿ ಮಕ್ಕಳು ಇರುತ್ತಾರೆ ಎಂದರೆ ಹೌದು. ಸದರಿ ವಿಚಾರಕ್ಕೆ ಪಂಚಾಯ್ತಿ ನಡೆದಿದ್ದು, ಪಂಚಾಯ್ತಿಯಲ್ಲಿ ಅಕ್ರಮ ಸಂಬಂಧದ ಬಗ್ಗೆ ಪ್ರಸ್ತಾವಣೆ ಆಗಿ ಬೇರೆ ಬೇರೆ ಇರಬೇಕು ಎಂದು ಹಿರಿಯರು ತೀರ್ಮಾನ ಮಾಡಿದ್ದರು ಎಂದರೆ ಸರಿಯಲ್ಲ. ಅಷ್ಟೇಲ್ಲ ತೀರ್ಮಾನ ಆಗಿದ್ದರು ಸಹ ಮಹದೇವಸ್ವಾಮಿ @ ದ್ವಾರಕಿ ನಮ್ಮ ಮನೆಯ ನಿರ್ವಹಣೆ ಈಗಲೂ ಅವರೇ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮೊಮ್ಮಗಳು ಪೂಜಾಶ್ರೀ ಹಾಗೂ ಆರೋಪಿ ಒಬ್ಬರನ್ನೊಬ್ಬರು ಪರಸ್ಪರ ಪ್ರೀತಿಸುತ್ತಿದ್ದರು ಎಂದರೆ ಸರಿಯಲ್ಲ. ಈ ವಿಷಯ ನನಗೆ ತಿಳಿದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಭಾಗ್ಯಲಕ್ಷ್ಮೀ ಊರನ್ನು ಬಿಟ್ಟು ಹೋದರೆ 3-4 ದಿವಸ ಊರಿಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಮೊಮ್ಮಗಳು ಪೂಜಾಶ್ರೀ ಹಾಗೂ ಆರೋಪಿ ಪ್ರೀತಿಸುತ್ತಿದ್ದ ಬಗ್ಗೆ 3-4 ಬಾರಿ ಊರಿನಲ್ಲಿ ಪಂಚಾಯ್ತಿ ನಡೆದಿತ್ತು ಎಂದರೆ ಸರಿಯಲ್ಲ. ನನ್ನ ಮೊಮ್ಮಗಳಿಗೆ ಸರ್ಕಾರಿ ನೌಕರಿಯಲ್ಲಿ ಇರುವ ಹುಡುಗನೊಂದಿಗೆ ಮದುವೆ ಮಾಡಬೇಕು ಎಂದು ಹೇಳಿ, ನನ್ನ ಮೊಮ್ಮಗಳು ಹಾಗೂ ಆರೋಪಿಯ ನಡುವೆ ಇದ್ದ ಪ್ರೀತಿಗೆ ನಾವು ಅಡ್ಡಿ ಉಂಟುಮಾಡಿದ್ದೆವು ಎಂದರೆ ಸರಿಯಲ್ಲ. ನಾನು, ನನ್ನ ಮಗಳು ಭಾಗ್ಯಲಕ್ಷ್ಮೀ, ಮಹದೇವಸ್ವಾಮಿ ರವರು 3 ಜನರು ಸೇರಿಕೊಂಡು ಆರೋಪಿಯ ವಿರುದ್ಧ ಮದುವೆ ವಿಚಾರದಲ್ಲಿ ಯಾವಾಗಲೂ ಜಗಳ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನನ್ನ ಮಗಳ ಚಾರಿತ್ರ್ಯ ಸರಿಯಾಗಿ ಇಲ್ಲದೇ ಇದ್ದ ಕಾರಣ ಅವಳ ವಿರುದ್ಧ ಕೌಟುಂಬಿಕ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಆಗಿತ್ತು ಎಂದರೆ ಸರಿಯಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟ ಹೇಳಿಕೆಯನ್ನು ಯಾವ ಪೊಲೀಸರ ಮುಂದೆ ಹೇಳಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಾನು ಹಾಗೂ ಮಹದೇವಸ್ವಾಮಿ ಸೇರಿಕೊಂಡು ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿದಿರುತ್ತೇವೆ ಎಂದರೆ ಸರಿಯಲ್ಲ. ಪುಟ್ಟರಂಗಯ್ಯನ ಹೆಂಡತಿ ನಾಗಮಣಿ ಅವರು ನನ್ನ ತಮ್ಮನ ಹೆಂಡತಿ. ಆರೋಪಿ ಮತ್ತು ನನ್ನ ಮೊಮ್ಮಗಳು ಪ್ರೀತಿ ಮಾಡುತ್ತಿದ್ದ ವಿಚಾರ ಇಡಿ ಊರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಈ ವಿಚಾರ ಎಲ್ಲಾ ಗೊತ್ತಿದ್ದರೂ ಸಹ ಆರೋಪಿ ಮೇಲೆ ದ್ವೇಷ ಇರುವ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಹೇಳಿಕೆಯನ್ನು ನೀಡಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ:– ಇಲ್ಲ.</u>**

(ನನ್ನ ಉಕ್ತಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

**ಓ ಹೇ ಕೇ ಸ ಇ ಎ ಒ**

**C/c 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು**